VAGDEVI VILAS SUPER SCHOOL®

Affiliated to CBSE, New Delhi

100% Free School For Under Privileged Children

Marathahalli and Varthur

Email: info@vvi.edu.in Web: www.vvssm.edu.in, vvssv.in, vvi.edu.in

न हि ज्ञानेन सदृशं पवित्रमिह विद्यते ।

A Decade of Transforming Lives Through Education

10 YEARS

Education Beyond Academic Excellence



"If the poor cannot come to education, education must reach them"

Education is the most powerful and enduring instrument of nation-building.

Poverty should never be allowed to become a barrier to acquiring quality education, for it is the constitutional right of every child. Guided by this profound conviction, **Shri K. Harish**, a visionary educationist and social reformer, envisioned a future where every child irrespective of economic or social background would have access to meaningful, value-based, and high-quality education. This belief laid the foundation for an extraordinary service initiative that has today become a beacon of hope for thousands of underprivileged families. Inspired by this noble ideal **Vagdevi Vilas Super Schools were established in the year 2015** at **Marathahalli** and **Varthur**, functioning under the Central Board of Secondary Education (CBSE) curriculum. From their very inception, these institutions were conceived not merely as schools, but as powerful instruments of social transformation where education is offered as a right, not a privilege.

A Rare Model of Completely Free Quality Education

One of the most remarkable and rare features of the **Vagdevi Vilas Super Schools** is their unwavering commitment to providing completely free education from **Grade 1 to Grade 10** under the **CBSE syllabus** to children from economically disadvantaged and underprivileged families. This includes not only academic instruction but also holistic development through discipline, values, life skills, and character building.

In a time when quality education is increasingly commercialized and inaccessible to the marginalized, this initiative stands as a powerful counter-narrative-proving that excellence and compassion can walk hand in hand.

Well-trained teachers, excellent infrastructure, essential amenities, expert technical support and guidance are the key features of this special venture. State-of-the-art Laboratories, Atal Tinkering Lab, Research and Development Cell cater to the overall development of students.

The students of Vagdevi Vilas Super Schools perform well in academics as well as in co-curricular activities. They prove their mettle in life skills too. Once passed out of the institution, they carve a niche for themselves in the society in their chosen field.

“Education is not Preparation for Life, Education is Life Itself.”

Ten Years of Impact: Educating Generations, Empowering Families

Over the past decade, thousands of students have benefited from free, quality education at the **Vagdevi Vilas Super Schools**. What began as a humble yet determined effort has today grown into a life-changing movement, touching countless lives and reshaping destinies.

The success of this initiative is best reflected in its alumni. Hundreds of former students are currently pursuing higher education in diverse disciplines, including engineering, medicine, science, commerce, humanities, education, and professional studies. Many alumni have secured respectable positions across various fields, becoming self-reliant individuals who contribute meaningfully to society and the nation. For families that once struggled against the harsh realities of poverty, education has become a transformative force-lifting not just children, but entire households, out of cycles of deprivation and uncertainty.

Beyond Academics: Building Character and Confidence

The journey of the **Vagdevi Vilas Super Schools** has never been limited to academic success alone. Equal emphasis has been placed on nurturing values such as discipline, integrity, patriotism, social responsibility, and respect for Indian culture and ethos. Students are encouraged to dream big, think critically, and develop the confidence to face life's challenges with courage and dignity.

Through this holistic approach, the schools have succeeded in instilling self-belief, moral strength, and a sense of purpose in their students qualities that continue to guide them long after they leave the classroom.

Dashamanotsava::
A Remarkable Milestone!! Celebrating a Decade of Purposeful Service!!

As **Vagdevi Vilas Super Schools** proudly celebrate their **Dashamanotsava**, this milestone marks far more than the completion of ten years. It is a celebration of hope restored, lives transformed, and futures rebuilt through the power of education. It is a tribute to perseverance, vision, and selfless service.

This decennial celebration stands as a living testament to the unwavering commitment of **Shri K. Harish**, whose belief in education as a sacred tool for social upliftment has translated into measurable, lasting impact. His rare service initiative exemplifies how leadership rooted in values can create institutions that endure and inspire.

Looking Ahead: Renewed Commitment to the Future

The **Dashamanotsava** is not merely a moment of reflection on past achievements, but also a renewed pledge to the future. It reaffirms the institution's resolve to expand its reach, deepen its impact, and continue serving society with the same dedication and humility that marked its beginning.

As the journey moves forward, **Vagdevi Vilas Super Schools** remain committed to shaping enlightened citizens, responsible leaders, and compassionate human being sensuring that education continues to serve as a bridge from poverty to dignity, from limitation to opportunity.

Vagdevi Vilas Super Schools are not merely schools, but sanctuaries of hope. Not just classrooms, but foundations for a stronger nation. As this decade of service is celebrated, the legacy stands firm: **education in the service of society, and society strengthened through education.**

ವಾಗ್ದೇವಿ ವಿಲಾಸ ಸೂಪರ್ ಶಾಲೆಗಳು
ಮಾರತ್ತಹಳ್ಳಿ ಹಾಗೂ ವರ್ತೂರು

ದಶಮಾನೋತ್ಸವ (2015-2025)

ಶಿಕ್ಷಣದ ಮೂಲಕ ಜೀವನ ಪರಿವರ್ತನೆ – ಸಾರ್ಥಕ ಪಯಣದ ಒಂದು ದಶಕ

ಶಿಕ್ಷಣವು ವ್ಯಕ್ತಿತ್ವ ಹಾಗೂ ರಾಷ್ಟ್ರ ನಿರ್ಮಾಣದ ಪ್ರಮುಖ ಸಾಧನ. ಒಂದು ದೇಶವು ಅಭಿವೃದ್ಧಿ ಹೊಂದಬೇಕಾದರೆ ಹಾಗೂ ಸದೃಢಗೊಳ್ಳಬೇಕಾದರೆ ಪ್ರತಿಯೊಂದು ಮಗುವು ಗುಣಮಟ್ಟದ ಶಿಕ್ಷಣವನ್ನು ಪಡೆಯಬೇಕು. ಬಡತನ ಅಥವಾ ಇನ್ನಿತರೇ ಯಾವುದೇ ಕಾರಣಗಳು ಉತ್ತಮ ಶಿಕ್ಷಣ ಪಡೆಯಲು ಮಗುವಿಗೆ ಅಡ್ಡಿಯಾಗಬಾರದು. ಈ ಮಾತುಗಳಲ್ಲಿ ಅದಲ ನಂಬಿಕೆಯಿಟ್ಟವರು ವಾಗ್ದೇವಿ ವಿಲಾಸ ಸೂಪರ್ ಶಾಲೆಗಳ ರೂವಾರಿ ಶ್ರೀ ಕೆ.ಹರೀಶ್. ಪ್ರತಿಯೊಂದು ಮಗುವು ಶ್ರೇಷ್ಟ ಶಿಕ್ಷಣವನ್ನು ಪಡೆದುಕೊಂಡು ದೇಶವನ್ನು ಮತ್ತಷ್ಟು ಉತ್ತುಂಗಕ್ಕೆ ಕೊಂಡೊಯ್ಯಬೇಕು ಎಂಬ ಕನಸು ಕಂಡವರು ಇವರು. ಈ ಕನಸನ್ನು ಸಾಕರಗೊಳಿಸಿಕೊಳ್ಳಲು ಅವರು ಕಂಡುಕೊಂಡ ಮಾರ್ಗವೇ ವಾಗ್ದೇವಿ ವಿಲಾಸ ಸೂಪರ್ ಶಾಲೆಗಳ ಸ್ಥಾಪನೆ. ಈ ಶಾಲೆಗಳ ಮೂಲಕ ಬಡತನದ ಹಿನ್ನೆಲೆಯಿರುವ ಕುಟುಂಬದ ವಿದ್ಯಾರ್ಥಿಗಳಿಗೆ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಸಿ.ಬಿ.ಎಸ್.ಇ ಪಠ್ಯಕ್ರಮದಲ್ಲಿ ಸಂಪೂರ್ಣವಾಗಿ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಮೂಲಕ ವಾಗ್ದೇವಿ ವಿಲಾಸ ಸೂಪರ್ ಶಾಲೆಗಳು ಸಾವಿರಾರು ಬಡ ಕುಟುಂಬಗಳ ವಿದ್ಯಾರ್ಥಿಗಳ ಬಾಳಿನಲ್ಲಿ ನವನಂಬಿಕೆಯನ್ನು ಮೂಡಿಸಿ, ಶಿಕ್ಷಣ ಕ್ಷೇತ್ರದಲ್ಲೊಂದು ಮೌನಕ್ರಾಂತಿಗೆ ಮುನ್ನುಡಿ ಬರೆದಿವೆ.

ಪ್ರತಿ ಮಗುವು ತನ್ನಲ್ಲೊಂದು ವಿಶೇಷವಾದ ಪ್ರತಿಭೆಯನ್ನು ಅಡಗಿಸಿಕೊಂಡಿರುತ್ತದೆ. ಅದು ಅನಾವರಣಗೊಳ್ಳಲು ಸೂಕ್ತ ಶೈಕ್ಷಣಿಕ ಪರಿಸರವು ಅಗತ್ಯವಾಗಿರುತ್ತದೆ. ಇಂತಹ ಪೂರಕ ಶೈಕ್ಷಣಿಕ ಪರಿಸರದ ನಿರ್ಮಾಣ ಹಾಗೂ ಭಾರತೀಯ ಮೌಲ್ಯಗಳನ್ನು ಬುನಾದಿಯಾಗಿಸಿಕೊಂಡ ಗುಣಮಟ್ಟ ಶಿಕ್ಷಣವು ಎಲ್ಲರಿಗೂ ದೊರಕಬೇಕು ಎನ್ನುವ ಮಹತ್ತರ ಆದರ್ಶದೊಂದಿಗೆ 2015 ರಲ್ಲಿ ಮಾರತ್ತಹಳ್ಳಿ ಹಾಗೂ ವರ್ತೂರಿನಲ್ಲಿ ಸಿ.ಬಿ.ಎಸ್.ಇ ಪಠ್ಯಕ್ರಮದ ವಾಗ್ದೇವಿ ವಿಲಾಸ ಸೂಪರ್ ಶಾಲೆಗಳು ಪ್ರಾರಂಭಗೊಂಡವು.ಈ ಶಾಲೆಗಳು ಕೇವಲ ಶಿಕ್ಷಣ ಸಂಸ್ಥೆಗಳು ಮಾತ್ರವಾಗಿರದೆ ಸಮಾಜ ಪರಿವರ್ತನೆಯ ಸಮರ್ಥ ಸಾಧನವಾಗಿ ರೂಪುಗೊಂಡಿವೆ.

ಸಂಪೂರ್ಣ ಉಚಿತ ಗುಣಮಟ್ಟದ ಶಿಕ್ಷಣ – ಒಂದು ಅಪರೂಪದ ಮಾದರಿ

ವಾಗ್ದೇವಿ ವಿಲಾಸ ಸೂಪರ್ ಶಾಲೆಗಳ ವಿಶೇಷತೆ ಏನೆಂದರೆ ಇಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಬಡತನದಲ್ಲಿರುವ ಕುಟುಂಬದ ಮಕ್ಕಳಿಗೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಸಿ.ಬಿ.ಎಸ್.ಇ ಪಠ್ಯಕ್ರಮದಲ್ಲಿ ಸಂಪೂರ್ಣವಾಗಿ ಉಚಿತ ಶಿಕ್ಷಣವನ್ನು ನೀಡುತ್ತಿರುವುದು. ಇಲ್ಲಿ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವದ ನಿರ್ಮಾಣಕ್ಕೆ ಪೂರಕವಾದ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗಿದ್ದು, ಪ್ರತಿ ವಿದ್ಯಾರ್ಥಿಯು ಶಿಸ್ತು ಹಾಗೂ ಮೌಲ್ಯಗಳನ್ನು ರೂಢಿಸಿಕೊಂಡು, ಜೀವನ ಕೌಶಲ್ಯಗಳನ್ನು ಬೆಳೆಸಿಕೊಂಡು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳವತ್ತ ಕಾರ್ಯೋನ್ಮುಖವಾಗಿವೆ. ಶಿಕ್ಷಣವು ದಿನೇದಿನೇ ವ್ಯಾಪಾರೀಕರಣಗೊಳ್ಳುತ್ತಿರುವ ಇಂದಿನ ಕಾಲಘಟ್ಟದಲ್ಲಿ ಸಂಪೂರ್ಣವಾಗಿ ಉಚಿತ ಶಿಕ್ಷಣವನ್ನು ನೀಡುತ್ತಿರುವ ಈ ವಾಗ್ದೇವಿ ವಿಲಾಸ ಸೂಪರ್ ಶಾಲೆಗಳು ಮರುಭೂಮಿಯಲ್ಲಿರುವ ಒಯಸಿಸ್‌ನಂತೆ ಬಡ ವಿದ್ಯಾರ್ಥಿಗಳ ಜ್ಞಾನದಾಹವನ್ನು ತಣಿಸುತ್ತಿವೆ.

ಹತ್ತು ವರ್ಷಗಳ ಪ್ರಭಾವ: ಭವಿಷ್ಯದ ಕುಡಿಗಳಿಗೆ ಶಿಕ್ಷಣ, ಬಡ ಕುಟುಂಬಗಳಿಗೆ ಶಕ್ತಿ

ಕಳೆದ ಒಂದು ದಶಕದಲ್ಲಿ, ವಾಗ್ದೇವಿ ವಿಲಾಸ ಸೂಪರ್ ಶಾಲೆಗಳು ನೀಡುತ್ತಿರುವ ಉಚಿತ ಮತ್ತು ಗುಣಮಟ್ಟದ ಶಿಕ್ಷಣದಿಂದ ಸಾವಿರಾರು ವಿದ್ಯಾರ್ಥಿಗಳು ಲಾಭ ಪಡೆದಿದ್ದಾರೆ. ಒಂದು ಶ್ರೇಷ್ಠ ಆಲೋಚನೆಯನ್ನು ದೃಢ ಸಂಕಲಕಾರ್ಯಗತಗೊಳಿಸಿದಾಗ ಹೇಗೆ ಸಾವಿರಾರು ಜನರ ಬದುಕಿನಲ್ಲಿ ಪರಿವರ್ತನೆಗೆ ಕಾರಣವಾಗಬಹುದು ಎಂಬುದಕ್ಕೆ ಸೂಪರ್ ಶಾಲೆಗಳ ಸೇವಾ ಕಾರ್ಯ ಒಂದು ಜೀವಂತ ಉದಾಹರಣೆಯಾಗಿದೆ.

ಈ ಮಹತ್ತರ ಕಾರ್ಯದ ಯಶಸ್ಸಿನ ಪ್ರತಿಫಲನವೆಂಬಂತೆ ಈ ಶಾಲೆಗಳಲ್ಲಿ ವ್ಯಾಸಂಗ ನಡೆಸಿದ್ದ ನೂರಾರು ವಿದ್ಯಾರ್ಥಿಗಳು ಇಂಜಿನಿಯರಿಂಗ್, ವೈದ್ಯಕೀಯ, ಮಾನವಿಕ ಶಿಕ್ಷಣ ಇನ್ನಿತರ ವೃತ್ತಿಪರ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅಲ್ಲದೇ ಹಲವು ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ತಾವು ಪಡೆದ ಶಿಕ್ಷಣದಿಂದ ಸ್ವಾವಲಂಬಿ ಜೀವನವನ್ನು ನಡೆಸುತ್ತಾ ಸಮಾಜ ಹಾಗೂ ರಾಷ್ಟ್ರಕ್ಕೆ ಅರ್ಥಪೂರ್ಣ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ.

ಬಡತನದ ಕಠಿಣ ಸವಾಲುಗಳನ್ನು ಎದುರಿಸುತ್ತಿದ್ದ ಅದೆಷ್ಟೋ ಕುಟುಂಬಗಳು, ಇಂದು ತಮ್ಮ ಮಕ್ಕಳಿಗೆ ದೊರೆತ ಈ ಉಚಿತ ಶಿಕ್ಷಣದ ಫಲವಾಗಿ ಬಡತನದ ವಿಷ ವರ್ತುಲದಿಂದ ಹೊರಬಂದಿವೆ. ಅಂದರೆ ಈ ಸೂಪರ್ ಶಾಲೆಗಳು ಕೇವಲ ವಿದ್ಯಾರ್ಥಿಗಳ ಬದುಕಿನಲ್ಲಿ ಮಾತ್ರವಲ್ಲದೆ ಅವರ ಕುಟುಂಬಗಳಿಗೂ ಹೊಸ ಆಶಾಭಾವವನ್ನು ಮೂಡಿಸಿವೆ.

ವ್ಯಕ್ತಿತ್ವ ಹಾಗೂ ಆತ್ಮವಿಶ್ವಾಸ ನಿರ್ಮಾಣಕ್ಕೆ ಅಡಿಗಲ್ಲು

ವಾಗ್ದೇವಿ ವಿಲಾಸ ಸೂಪರ್ ಶಾಲೆಗಳ ವಿದ್ಯಾರ್ಥಿಗಳ ಸಾಧನೆ ಕೇವಲ ಶೈಕ್ಷಣಿಕ ಪ್ರಗತಿಗೆ ಮಾತ್ರ ಸಿಮೀತವಾಗಿಲ್ಲ. ಏಕೆಂದರೆ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ನಿಯಮಿತ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಶಿಸ್ತು, ಪ್ರಾಮಾಣಿಕತೆ, ದೇಶಭಕ್ತಿ, ಸಾಮಾಜಿಕ ಜವಾಬ್ದಾರಿ ಹಾಗೂ ಭಾರತೀಯ ಸಂಸ್ಕೃತಿ ಮತ್ತು ಮೌಲ್ಯಗಳಿಗೆ ಗೌರವ ನೀಡುವಂತಹ ಗುಣಗಳನ್ನು ಬೆಳೆಸಲು ಸಮಾನ ಆದ್ಯತೆ ನೀಡಲಾಗಿದೆ.

ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಿ, ಆತ್ಮವಿಶ್ವಾಸವನ್ನು ತುಂಬಿ ಅವರನ್ನು ಮುಂದಿನ ಜೀವನಕ್ಕೆ ಸರ್ವ ಸನ್ನದ್ಧರಾಗಿಸಲು ಪೂರಕವಾದ ಶಿಕ್ಷಣವನ್ನು ಇಲ್ಲಿ ಒದಗಿಸಲಾಗುತ್ತಿದೆ. ವಿದ್ಯಾರ್ಥಿಗಳು ಶಾಲಾ ಶಿಕ್ಷಣವನ್ನು ಪೂರೈಸಿದ ನಂತರವೂ ಅವರ ಬದುಕನ್ನು ಪ್ರಭಾವಿತಗೊಳಿಸುವಂತಹ ಸಮಗ್ರ ವ್ಯಕ್ತಿತ್ವ ವಿಕಸನ ಈ ಶಾಲೆಗಳ ಪ್ರಮುಖ ಧ್ಯೇಯವಾಗಿದೆ.

ದಶಮಾನೋತ್ಸವ – ಸಾರ್ಥಕ ಸೇವೆಯ ಹಾದಿಯಲ್ಲೊಂದು ಅಪೂರ್ವ ಮೈಲಿಗಲ್ಲು

ವಾಗ್ದೇವಿ ವಿಲಾಸ ಸೂಪರ್ ಶಾಲೆಗಳ ಈ ಹೆಮ್ಮೆಯ ಶೈಕ್ಷಣಿಕ ಕೈಂಕರ್ಯಕ್ಕೆ ಈಗ ದಶಮಾನೋತ್ಸವದ ಸಂಭ್ರಮ. ಇದು ಕೇವಲ ಹತ್ತು ವರ್ಷಗಳನ್ನು ಪೂರ್ಣಗೊಳಿಸಿರುವ ಸಂಕೇತವಲ್ಲ, ಬದಲಿಗೆ ಬಾಳಿನಲ್ಲೊಂದು ನಂಬಿಕೆಯನ್ನು ಮೂಡಿಸಿ, ಸಹಸ್ರಾರು ವಿದ್ಯಾರ್ಥಿಗಳ ಜೀವನವನ್ನು ಪರಿವರ್ತನೆಗೊಳಿಸಿ ಭವಿಷ್ಯವನ್ನು ಬೆಳಗಿದ ಸಂಭ್ರಮ. ಇದು ವಿಶಾಲ ದೃಷ್ಟಿಕೋನಕ್ಕೆ, ಒಳಿತಿಗಾಗಿ ಕಾರ್ಯಮಗ್ನವಾದ ಧೀಮಂತಿಕೆಗೆ ಹಾಗೂ ನಿಸ್ವಾರ್ಥ ಸೇವೆಗೆ ಗೌರವ ಸಲ್ಲಿಸುವ ಸಂತೋಷದ ಗಳಿಗೆ.

ಈ ದಶಮಾನೋತ್ಸವು ಶಿಕ್ಷಣವು ಸಮಾಜದ ಒಳಿತಿಗಾಗಿ ಇರುವ ಪ್ರಬಲ ಸಾಧನ ಎಂದು ನಂಬಿರುವ ಶ್ರೀ ಕೆ. ಹರೀಶ್ ಅವರ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ. ಸಂಸ್ಥೆಯೊಂದು ಮೌಲ್ಯಾಧಾರಿತ ನಾಯಕತ್ವದೊಂದಿಗೆ ಹೆಜ್ಜೆ ಹಾಕಿದಾಗ ಹೇಗೆ ಅದೊಂದು ಪ್ರೇರಣದಾಯಕ ಯಶೋಗಾಥೆಯಾಗುತ್ತದೆ ಎನ್ನುವುದಕ್ಕೆ ಈ ಸೂಪರ್ ಶಾಲೆಗಳು ಅಪೂರ್ವ ಉದಾಹರಣೆಗಳಾಗಿವೆ. ಈ ಶಾಲೆಗಳ ಸೇವಾಕಾರ್ಯವು ಹಲವಾರು ಜನರ ಬಾಳಿಗೆ ದಾರಿದೀವಿಗೆಯಾಗಿದೆ.

ಮುಂದಿನ ಪಥ: ಯುವ ಜನಾಂಗದ ಭವಿಷ್ಯ ರೂಪಿಸುವ ಸಂಕಲ್ಪ

ದಶಮಾನೋತ್ಸವವು ಕೇವಲ ಹಿಂದಿನ ಸಾಧನೆಗಳ ಸ್ಮರಣೆಯಲನಡೆದು ಬಂದ ಹಾದಿಯನ್ನು ಅವಲೋಕಿಸುತ್ತಾ ಮುಂದಿನ ಪಯಣಕ್ಕೆ ದೃಢ ಸಂಕಲ್ಪದಿಂದ ಅಣಿಗೊಳ್ಳುತ್ತಿರುವ ಕ್ಷಣವಿದು. ಇದು ಸೇವೆಯ ವ್ಯಾಪ್ತಿಯನ್ನು ವಿಸ್ತರಿಸಲು, ಇನ್ನಷ್ಟು ವಿದ್ಯಾರ್ಥಿಗಳ ಜೀವನವದ ಮೇಲೆ ಪ್ರಭಾವ ಬೀರಲು ಸಂಕಲ್ಪಿಸುವ ಸಮಯ. ಮತ್ತಷ್ಟು ಸಮರ್ಪಣ ಭಾವದಿಂದ ಹಾಗೂ ವಿನಯದಿಂದ ಈ ಸಮಾಜ ಸೇವೆಯನ್ನು ಮುಂದುವರಿಸಲು ದೃಢ ನಿಶ್ಚಯ ಪ್ರಕಟಿಸುವ ಸುವರ್ಣ ಗಳಿಗೆ.

ವಾಗ್ದೇವಿ ವಿಲಾಸ ಸೂಪರ್ ಶಾಲೆಗಳು ಭವಿಷ್ಯದಲ್ಲಿ ಪ್ರಜ್ಞಾವಂತ ನಾಗರೀಕರನ್ನು, ಜವಾಬ್ದಾರಿಯುತ ನಾಯಕರನ್ನು, ಎಲ್ಲದಕ್ಕಿಂತಲೂ ಹೆಚ್ಚಾಗಿ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡ ವ್ಯಕ್ತಿಗಳನ್ನು ರೂಪಿಸುವ ಧ್ಯೇಯದೊಂದಿಗೆ ಎಂದಿಗೂ ರಾಜಿಯಾಗದೆ ಹೆಜ್ಜೆಹಾಕಲಿವೆ. ಶಿಕ್ಷಣದ ಮೂಲಕ ಪ್ರತಿ ವಿದ್ಯಾರ್ಥಿಯು ಗೌರವಯುತ ಜೀವನವನ್ನು ಕಟ್ಟಿಕೊಂಡು, ಅಮಿತ ಅವಕಾಶಗಳ ಬಾನಂಗಳದಲ್ಲಿ ವಿಹರಿಸುವಂತೆ ಮಾಡುವ ಸದಾಶಯ ಈ ಸೂಪರ್ ಶಾಲೆಗಳದ್ದು.

ಇವು ಕೇವಲ ಶಾಲೆಗಳಲ್ಲ: ಹೊಸ ಭರವಸೆಗಳ ಭಂಡಾರಗಳು. ಇಲ್ಲಿರುವುದು ಕೇವಲ ತರಗತಿಗಳಲ್ಲ: ಸದೃಢ ರಾಷ್ಟ್ರ ನಿರ್ಮಾಣದ ಕಾರ್ಯಾಗಾರಗಳು. ಸೇವೆಗಾಗಿ ಮುಡಿಪಾದ ಒಂದು ಸುಯೋಜಿತ, ಸಂಘಟಿತ ಪರಂಪರೆಯ ದರ್ಶನ ಈ ದಶಮಾನೋತ್ಸವ.



न हि ज्ञानेन सदृशं पवित्रमिह विद्यते ।

Vagdevi Vilas Institutions is a premier and a leading group of educational Institutions founded by **former Scientist of ISRO Sri. K. Harish**. **It has an elite academic advisory board comprising of renowned educationists and scientists**, whose dream is to create a world class human resource from among the students of our institutions and evolve them as leaders of tomorrow who would take India on to the top of the world in all aspects.

At our Institution, education is a noble instrument with which we mould future generations into responsible citizens and good human beings. **Vagdevi Vilas Institutions** is dedicated to bringing out the latent talents and potentials of children and shape them as future leaders and nation builders.